Online Newspaper Clipping Service

**Dtd- Saturday, 16th, March- 2019**



ವಿಜಯ ಕರ್ನಾಟಕ

# ಪಿಜಿ ವೈದ್ಯ ಕೋರ್ಸ್ ಶುಲ್ಕ 5 ಪಟ್ಟು ಹೆಚ್ಚಳ

**ವಿಕ ಸುದ್ದಿಲೋಕ** ಬೆಂಗಳೂರು

ಖಾಸಗಿ ವೈದ್ಯ ಕಾಲೇಜುಗಳಲ್ಲಿನ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಶುಲ್ಕ ಹೆಚ್ಚಳದ ಬೆನ್ನಲ್ಲಿಯೇ ಇದೀಗ ಸರಕಾರಿ ವೈದ್ಯ ಕಾಲೇಜುಗಳ ಪಿಜಿ ಕೋರ್ಸ್‌ಗಳ ಶುಲ್ಕವನ್ನು ರಾಜ್ಯ ಸರಕಾರ ಐದು ಪಟ್ಟು ಹೆಚ್ಚಿಸಿದೆ.

2019-20ನೇ ಶೈಕ್ಷಣಿಕ ವರ್ಷದಲ್ಲಿ ಕ್ಲಿನಿಕಲ್ ಕೋರ್ಸ್‌ಗಳ ಶುಲ್ಕ 20 ಸಾವಿರ ರೂ.,ಗಳಿಂದ 1 ಲಕ್ಷಕ್ಕೆ, ಪ್ಯಾರಾ-ಕ್ಲಿನಿಕಲ್ ಸ್ನಾತಕೋತ್ತರ ವೈದ್ಯ ಕೋರ್ಸ್‌ನ ಶುಲ್ಕವನ್ನು 10 ಸಾವಿರದಿಂದ 50 ಸಾವಿರ ರೂ.ಗಳಿಗೇರಿಸಲಾಗಿದೆ.

2018-19ರಲ್ಲಿ ಕೇವಲ ಐದು ಸಾವಿರ ರೂ.ಗಳಷ್ಟಿದ್ದ ಸ್ನಾತಕೋತ್ತರ ವೈದ್ಯ ಪದವಿಯ ಪ್ರೀ-ಕ್ಲಿನಿಕಲ್ ಕೋರ್ಸ್‌ನ ಶುಲ್ಕವನ್ನು 25 ಸಾವಿರ ರೂ.ಗಳಿಗೆ ಹೆಚ್ಚಿಸಲಾಗಿದೆ. ವಿದ್ಯಾರ್ಥಿಗಳು ವಿವಿ ಹಾಗೂ ಹಾಸ್ಟೆಲ್ ಶುಲ್ಕವನ್ನು ಪ್ರತ್ಯೇಕವಾಗಿ ಪಾವತಿಸಬೇಕಿದೆ.

»03

ವಿಜಯ ಕರ್ನಾಟಕ

# ಪಿಜಿ ವೈದ್ಯ ಕೋರ್ಸ್ ಶುಲ್ಕ 5 ಪಟ್ಟು ಹೆಚ್ಚಳ

» ಮೊದಲ ಪುಟದಿಂದ

''ರಾಜ್ಯ ಸರಕಾರ ಚುನಾವಣಾ ನೀತಿಸಂಹಿತೆ ಜಾರಿಗೊಳ್ಳುವ ಮುನ್ನವೇ ಶುಲ್ಕ ಏರಿಕೆ ಬಗ್ಗೆ ನಿರ್ಧಾರ ಕೈಗೊಂಡಿದೆ. ಅದೇ ತೀರ್ಮಾನದ ಆಧಾರದಲ್ಲಿ ಅಧಿಸೂಚನೆ ಹೊರಡಿಸಲಾಗಿದೆ'' ಎಂದು ವೈದ್ಯಕೀಯ ಶಿಕ್ಷಣ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ. ಒಂದು ವೈದ್ಯಕೀಯ ಕಾಲೇಜು ಸ್ಥಾಪಿಸಲು ಸರಕಾರ 500 ಕೋಟಿ ರೂ. ವೆಚ್ಚ ಮಾಡಲಿದೆ. ಹಾಗೆಯೇ, ಪ್ರತಿ ವರ್ಷ ಕಾಲೇಜಿನ ನಿರ್ವಹಣೆ ಹಾಗೂ ವೇತನಕ್ಕಾಗಿ ಹಲವು ಕೋಟಿ ರೂ. ವ್ಯಯವಾಗಲಿದೆ. ಈ ಹೊರೆಯನ್ನು ನೀಗಿಸುವುದಕ್ಕಾಗಿ ಸ್ನಾತಕೋತ್ತರ ವೈದ್ಯ ಪದವಿ ಕೋರ್ಸ್‌ಗಳ ಶುಲ್ಕವನ್ನು ಸರಕಾರ ಹೆಚ್ಚಿಸಿದೆ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. 2018-19ನೇ ಸಾಲಿನಲ್ಲಿ ಸರಕಾರಿ ವೈದ್ಯ ಕಾಲೇಜುಗಳ ಎಂಬಿಬಿಎಸ್ ಪ್ರವೇಶ ಶುಲ್ಕವನ್ನು ಸರಕಾರ ಶೇ. 200ರಷ್ಟು ಹೆಚ್ಚಿಸಿತ್ತು. ಇದರಿಂದ ವಿದ್ಯಾರ್ಥಿಗಳು 50 ಸಾವಿರ ರೂ. ಶುಲ್ಕದ ಜತೆಗೆ, ವಿಶ್ವವಿದ್ಯಾಲಯ ಶುಲ್ಕವಾಗಿ 9 ಸಾವಿರ ರೂ. ಪಾವತಿಸಿದ್ದರು.